# ಶಾನ್ವಿ ಕಹಾನಿ

**ಕನ್ನಡ ಚಿತ್ರರಂಗದಿಂದ ಕೊಂಚ ಕಣ್ಮರೆಯಾದಂತಿದ್ದ ನಟಿ ಶಾನ್ವಿ ಶ್ರೀವಾಸ್ತವ ಇದೀಗ ಒಂದಷ್ಟು ಸಿನಿಮಾಗಳ ಮೂಲಕ ಮತ್ತೆ ತೆರೆಗೆ ಬರುತ್ತಿದ್ದಾರೆ. ಹೊಸ ಹುಮ್ಮಸ್ಸಿನೊಂದಿಗೆ ಸಿನಿಮಾಗಳನ್ನು ಮಾಡುತ್ತಿರುವ ಅವರು, 'ಸುಧಾ' ಜೊತೆಗೆ ತಮ್ಮ ಸಿನಿ ಬದುಕಿನ ಕುರಿತು ಮಾತನಾಡಿದ್ದಾರೆ.**

■ ಸುಮಲತಾ ಎನ್.



◆ **ಕನ್ನಡ ಸಿನಿಮಾರಂಗದಿಂದ ಮರೆಯಾದಂತೆ ಕಾಣುತ್ತಿದೆಯಲ್ಲ?**

ಸಿನಿಮಾಗಳ ನಡುವೆ ಸ್ವಲ್ಪ ಗ್ಯಾಪ್ ಆಯಿತು ಅಷ್ಟೆ. ಕೆಲವು ಸಿನಿಮಾಗಳ ಚಿತ್ರೀಕರಣದಲ್ಲಿ ತೊಡಗಿಕೊಂಡಿದ್ದೆ. ಈಗ ಸಿನಿಮಾ ನಿರ್ಮಾಣವೂ ಕಡಿಮೆಯಾಗಿದೆ. ಸ್ಟಾರ್‌ಗಳ ಸಿನಿಮಾಗಳಂತೂ ಬೆರಳೆಣಿಕೆಯಷ್ಟಿದೆ. ಸಿನಿಮಾ ಮಾಡಬೇಕೆಂದರೆ ಒಳ್ಳೆಯ ಕಥೆಗಳು ಬೇಕು. ಸುಮ್ಮನೆ ಕಾಣಿಸಿಕೊಳ್ಳಬೇಕು ಎನ್ನುವ ಒಂದೇ ಕಾರಣಕ್ಕೆ ಸಿನಿಮಾ ಮಾಡಿದರೆ ನನಗೆ ತೃಪ್ತಿ ಇರುವುದಿಲ್ಲ. ಸ್ಕ್ರಿಪ್ಟ್ ಚೆನ್ನಾಗಿದ್ದರೆ, ಒಳ್ಳೆಯ ಕಂಟೆಂಟ್ ಇದ್ದರೆ ಕಲಾವಿದರಿಗೂ ಉತ್ಸಾಹ.

◆ **ಈಗ ಯಾವ ಸಿನಿಮಾಗಳಲ್ಲಿ ತೊಡಗಿಕೊಂಡಿದ್ದೀರಿ?**

ಈಗ ಸಿಂಪಲ್ ಸುನಿ ಅವರ 'ರಿಚಿ ರಿಚ್' ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಸುನಿ ಸರ್ ಜೊತೆ ಕೆಲಸ ಮಾಡಬೇಕು ಎಂಬಾಸೆ ತುಂಬಾ ವರ್ಷಗಳಿಂದ ಇತ್ತು. ಸ್ಕ್ರಿಪ್ಟ್ ಹಾಗೂ ತಂಡ ಚೆನ್ನಾಗಿದೆ. ಫ್ಯಾಮಿಲಿ ಎಂಟರ್‌ಟೇನ್ಮೆಂಟ್ ಸಿನಿಮಾ. ನಟ ಕಾರ್ತಿಕ್ ಮಹೇಶ್ ಈ ಸಿನಿಮಾದಿಂದ ಲಾಂಚ್ ಆಗುತ್ತಿದ್ದಾರೆ. ಹೊಸಬರೊಂದಿಗೆ ಕೆಲಸ ಮಾಡುವುದು ನನಗೆ ತುಂಬಾ ಇಷ್ಟ. ಮಲೆಯಾಳಂನ ಒಂದು ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಇದು ಕರ್ನಾಟಕ– ಕೇರಳ ಕಥೆ. ಇನ್ನೊಂದು ಸಿನಿಮಾ ಮಾತುಕತೆಯಲ್ಲಿದೆ. 'ಅಮೆರಿಕಾ ಅಮೆರಿಕಾ 2' ಚಿತ್ರೀಕರಣ ಈಚೆಗಷ್ಟೆ ಮುಗಿದಿದೆ. ಈ ವರ್ಷದ ಕೊನೆಯಲ್ಲಿ ಬಿಡುಗಡೆ ಆಗುತ್ತದೆ.

◆ **ನಾಗತಿಹಳ್ಳಿ ಚಂದ್ರಶೇಖರ್ ಅವರೊಂದಿಗೆ ಕೆಲಸ ಮಾಡಿದ ಅನುಭವ ಹೇಗಿತ್ತು?**

ಬಹಳ ಅರ್ಥಗರ್ಭಿತವಾಗಿತ್ತು. ಹೊಸ ಹೊಸ ನಿರ್ದೇಶಕರೊಂದಿಗೆ ಕೆಲಸ ಮಾಡಿರುವ ನನಗೆ ಪರಿಣತರಾದ ನಾಗತಿಹಳ್ಳಿ ಸರ್ ಜೊತೆ ಕೆಲಸ ಮಾಡಿದ್ದು ಭಿನ್ನವಾದ, ಅಷ್ಟೇ ಮೌಲ್ಯವಾದ ಅನುಭವ ನೀಡಿತು. ಅವರು ಸಿನಿಮಾದಲ್ಲಿ ಭಾವನೆಗಳಿಗೆ ತುಂಬಾ ಒತ್ತು ನೀಡುತ್ತಾರೆ. ಒಂದು ನಟಿಯಾಗಿ ನಮ್ಮನ್ನು ನಾವು ಇಂಪ್ರೂವ್ ಮಾಡಿಕೊಳ್ಳಲು ಈ ಥರದ ಎಮೋಷನ್‌ಗಳ ಅವಶ್ಯಕತೆ ಇರುತ್ತದೆ. ಈ ಸಿನಿಮಾದಲ್ಲಿ ಜನರು ಹೊಸ ಶಾನ್ವಿಯನ್ನು ನೋಡಬಹುದು.

◆ **ಒಂದು ಸ್ಕ್ರಿಪ್ಟ್ ಹೇಗಿರಬೇಕು ಎಂದು ನೀವು ಬಯಸುತ್ತೀರ?**

ನನಗೆ ಸ್ಕ್ರಿಪ್ಟ್ ಭಾವನಾತ್ಮಕವಾಗಿ ಕನೆಕ್ಟ್ ಆಗಬೇಕು. ಇಲ್ಲವೇ ಯುವಜನರನ್ನು ಗುರಿಯಾಗಿಟ್ಟುಕೊಂಡು ಚೆನ್ನಾಗಿ ನಿರೂಪಿಸಿರಬೇಕು. ನನ್ನ ಪಾತ್ರದ ಹೊರತಾಗಿ, ಕಥೆ ಮನಸ್ಸನ್ನು ಹಿಡಿದಿಟ್ಟುಕೊಳ್ಳುವಂತಿರಬೇಕು. ಕಥೆ ಎಷ್ಟು ಚೆನ್ನಾಗಿದೆ, ಎಷ್ಟು ತೂಕವಾಗಿದೆ ಎಂಬುದಕ್ಕೆ ಮೊದಲು ಪ್ರಾಮುಖ್ಯ ಕೊಡುತ್ತೇನೆ.

◆ **ಶಾನ್ವಿ ಬಯಸುವ, ಇನ್ನೂ ಕೈಗೆಟುಕದ ಪಾತ್ರ? ನೆಚ್ಚಿನ ಜಾನರ್?**

ನನ್ನನ್ನು ಜನರು ಸೈಕೊ ರೀತಿಯ ಪಾತ್ರದಲ್ಲಿ ಕಂಡಿಲ್ಲ. ಹಾಗೊಂದು ಸರ್‌ಪ್ರೈಸ್ ನೀಡುವಾಸೆ. ಜೊತೆಗೆ ಪೌರಾಣಿಕ ಪಾತ್ರಗಳು ನನಗೆ ತುಂಬಾ ಇಷ್ಟ. ಈ ರೀತಿಯ ಸಿನಿಮಾ ಅವಕಾಶ ಬಂದರೆ ಖಂಡಿತ ಮಾಡುತ್ತೇನೆ. ಒಳ್ಳೆಯ ರೊಮ್ಯಾಂಟಿಕ್ ಸಿನಿಮಾ ಮಾಡಬೇಕು ಎಂಬ ಆಸೆಯೂ ಇದೆ.

◆ **ನಿಮ್ಮ ಪ್ರಕಾರ ಸದ್ಯದ ಪರಿಸ್ಥಿತಿಯಲ್ಲಿ ಕನ್ನಡ ಸಿನಿಮಾಗಳು ಎದುರಿಸುತ್ತಿರುವ ಸವಾಲುಗಳು?**

ಪ್ರೇಕ್ಷಕರು ಸಿನಿಮಾ ನೋಡಲು ಥಿಯೇಟರ್‌ಗಳಿಗೆ ಬರುತ್ತಿಲ್ಲ. ಹೀಗಿದ್ದಾಗ ನಿರ್ಮಾಪಕರು ಸಿನಿಮಾ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಒಟಿಟಿಯಲ್ಲಿಯೂ ಕನ್ನಡ ಸಿನಿಮಾಗಳು ಯಶಸ್ವಿಯಾಗಿರಲಿಲ್ಲ. ಈಗೀಗ ಒಂದಿಷ್ಟು ಬೆಳವಣಿಗೆಯಾಗುತ್ತಿದೆ. ಕನ್ನಡ ಸಿನಿಮಾಗಳಿಗೆ ಒಟಿಟಿಯಲ್ಲಿ ಜಾಗ ಸಿಕ್ಕುತ್ತಿದೆ. ಅದೇ ಖುಷಿ. ■